**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ**
**ಸಂಚಾರಿ ನ್ಯಾಯಾಲಯ ಕಳಸ**

**ಸಿ.ಸಿ.ಸಂಖ್ಯೆ :770/2025**

ಪಿರ್ಯಾದಿ : ರಾಜ್ಯ, ಪರವಾಗಿ ಕಳಸ ಪೊಲೀಸ್ ಠಾಣೆ,
ಕಳಸ.

ವಿರುದ್ಧ

ಆರೋಪಿ : ರಘು ಜಿ.ಆರ್., ವಯಸ್ಸು ಸುಮಾರು 24 ವರ್ಷ,
ಬಿನ್ ರಾಜೇಗೌಡ, ವಾಸಃ ಜೋಡಿಗುಬ್ಬಿ ಗ್ರಾಮ,
ಹೊಳೆನರಸಿಪುರ ತಾಲೂಕು, ಹಾಸನ ಜಿಲ್ಲೆ.

**ಆಪಾದನೆಯ ಸಾರಾಂಶ.**

ಶ್ರೀಮತಿ ಸುರಕ್ಷ ಕೆ.ಕೆ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ದಿನಾಂಕ 25.05.2024 ರಂದು ರಾತ್ರಿ 8.30 ರ ಸಮಯದಲ್ಲಿ ಕಳಸ ಪೊಲೀಸ್ ಠಾಣಾ ವ್ಯಾಪ್ತಿಯ ಇಡಕಿಣಿ ಗ್ರಾಮದ ಹಿರೇಬೈಲ್ ಎಂಬಲ್ಲಿ ಹಾದುಹೋಗಿರುವ ಕಳಸ-ಕೊಟ್ಟಿಗೆಹಾರ ಮದ್ಯದ ರಾಜ್ಯ ಹೆದ್ದಾರಿ-106 ರಸ್ತೆಯಲ್ಲಿ ಆರೋಪಿಯಾದ ನೀವು ಸುಂಕಸಾಲೆ ಕಡೆಯಿಂದ ಹಿರೇಬೈಲ್ ಕಡೆಗೆ ನಿಮ್ಮ ವಾನ ನೋಂದಣಿ ಸಂಖ್ಯೆಃ ಕೆಎ-42-ಎಫ್-2136 ಕೆ.ಎಸ್.ಆರ್.ಟಿ.ಸಿ ಬಸ್ ನ್ನು ಅಲ್ಲಿನ ತಿರುವು ರಸ್ತೆಯಲ್ಲಿಯೂ ಸಹ ಅತಿವೇಗ, ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **279** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಹಿರೇಬೈಲ್ ಬಳಿ ಅದೇ ರಸ್ತೆಯಲ್ಲಿನ ಹಂಪ್ ನ್ನು ದಾಟಿಸಿದ್ದರಿಂದ ಸದರಿ ಬಸ್ಸಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಪ್ರಯಾಣಿಕ ಚಿನ್ನಪ್ಪ ಮಲಕಣ್ಣನವರ ಕುಳಿತಿದ್ದ ಸೀಟಿನಿಂದ ಕೆಳಗೆ ಬಿದ್ದಿದ್ದು, ಇದರಿಂದಾಗಿ ಇವರ ಬೆನ್ನಿನ ಮೂಳೆಗೆ ಒಳಪೆಟ್ಟಾಗಿದ್ದು, ಕಳಸ ಸರ್ಕಾರಿ ಆಸ್ಪತ್ರೆ ಹಾಗೂ ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದರೂ ಸಹ ಚಿಕಿತ್ಸೆ ಫಲಕಾರಿಯಾಗದೇ ಬೆನ್ನುಹುರಿಯ ನೋವಿನಿಂದ ದಿನಾಂಕಃ 27.06.2024 ರಂದು ಮೃತಪಟ್ಟಿರುತ್ತಾರೆ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **337** ಮತ್ತು **304(ಎ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರ:  1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ?  ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರ:

ಪ್ರ:  2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

(ಆರೋಪಿಗೆ ದಿನಾಂಕ 12.05.2025 ರಂದು ಆಪಾದನೆಯ ಸಾರಾಂಶವನ್ನು  ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಮೂಡಿಗೆರೆ, ಸಂಚಾರಿ ನ್ಯಾಯಾಲಯ ಕಳಸ.

ಮೂಡಿಗೆರೆ
ದಿನಾಂಕ: 12.05.2025.